# ಹೃದಯ ಸಮಸ್ಯೆ ಪತ್ತೆಗೆ

Google AI







## ಗೂಗಲ್ 'ಎಐ'

ಆರೋಗ್ಯ ಕ್ಷೇತ್ರದಲ್ಲಿ ತಂತ್ರಜ್ಞಾನ ಮಹತ್ವದ ಪಾತ್ರ ವಹಿಸುತ್ತಿದ್ದು, ಈ ವಿಚಾರದಲ್ಲಿ ಗೂಗಲ್ ಇನ್ನೂ ಒಂದು ಹೆಜ್ಜೆ ಮುಂದು ಹೋಗಿದೆ. ಆರೋಗ್ಯ ಸಂಬಂಧಿತ ಸಮಸ್ಯೆಗಳ ಪತ್ತೆಗೆ ಹಾಗೂ ಪರಿಹಾರಕ್ಕೆ 'ಎಐ'ಯತ್ತ (ಕೃತಕ ಬುದ್ಧಿಮತ್ತೆ) ಮುಖಮಾಡಿದೆ. ಅದರ ಅಂಗವಾಗಿಯೇ ಬೆಂಗಳೂರಿನಲ್ಲಿ ತನ್ನ ಎಐ ಕೇಂದ್ರವನ್ನು ಸ್ಥಾಪಿಸಲು ಮುಂದಾಗಿದೆ.

ಇದಕ್ಕಿಂತ ಹೊಸ ವಿಚಾರವೆಂದರೆ, ಗೂಗಲ್ ಕೃತಕ ಬುದ್ಧಿಮತ್ತೆಯ ಭಾಗವಾದ ಅಭಿವೃದ್ಧಿ ಪಡಿಸಿದ ಸಾಧನವೊಂದರ ಮೂಲಕ ಕಣ್ಣಿನ ಸ್ಕ್ಯಾನ್ ಮಾಡುವುದರಿಂದ, ಹೃದಯದ ರಕ್ತನಾಳಕ್ಕೆ ಸಂಬಂಧಿಸಿದ ಸಮಸ್ಯೆಗಳು ಹಾಗೂ ಭವಿಷ್ಯದಲ್ಲಿ ಎದುರಾಗುವ ಸಮಸ್ಯೆಗಳನ್ನು ಪತ್ತೆ ಮಾಡಬಹುದು.

ರೋಗಿಯ ಹೃದಯ ರಕ್ತನಾಳಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಅರಿಯಲು ಹಾಗೂ ಉಂಟಾಗಿರುವ ಸಮಸ್ಯೆಯು ರೋಗಿಯ ಮೇಲೆ ಎಷ್ಟರಮಟ್ಟಿಗೆ ಪರಿಣಾಮ ಬೀರಿದೆ ಎನ್ನುವುದನ್ನು ತಿಳಿಯಲು ವೈದ್ಯರು ಸಿಟಿ ಸ್ಕ್ಯಾನ್, ಎಂಆರ್ಐ ಮತ್ತು ಎಕ್ಸ್–ರೇ ರೀತಿಯ ಹತ್ತು ಹಲವು ರೀತಿಯ ಪರೀಕ್ಷೆಗಳನ್ನು ಮಾಡಬೇಕಿದೆ. ಆದರೆ ಗೂಗಲ್ ಎಐ ಹೇಳುವ ಪ್ರಕಾರ, ಕೇವಲ ಕಣ್ಣಿನ ಸ್ಕ್ಯಾನ್ ಮೂಲಕವೇ ಆ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿಯನ್ನು ತಿಳಿಯಬಹುದು.

ಗೂಗಲ್ ಕಂಪನಿಯ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಭಾಗವಾಗಿರುವ ಸಂಶೋಧಕರ ಸಂಶೋಧನೆಯಿಂದಾಗಿ ಈ ವಿಚಾರ ಹೊರಬಿದ್ದಿದೆ. ರೆಟಿನಾ ಚಿತ್ರವೊಂದರ ಮೂಲಕ ಹೃದಯ ರಕ್ತನಾಳ ಸಮಸ್ಯೆಗಳು ಅಂದರೆ ಹೃದಯಾಘಾತ, ಪಾರ್ಶ್ವವಾಯು ಸೇರಿದಂತೆ ಬೇರೆ ಬೇರೆ ಸಮಸ್ಯೆಗಳ ಬಗ್ಗೆ ನಿಖರವಾಗಿ ತಿಳಿಯಬಹುದು. ಅದಕ್ಕಾಗಿ ಸಹಜ ಪ್ರಕ್ರಿಯೆಯಂತೆ ರಕ್ತ ಪರೀಕ್ಷೆ ಹಾಗೂ ಅನ್ಯ ಪರೀಕ್ಷೆಗಳ ಅಗತ್ಯವಿಲ್ಲ ಎಂಬುದು ಸಂಶೋಧಕರ ವಾದವಾಗಿದೆ.

ಕಣ್ಣಿನ ಸ್ಕ್ಯಾನ್ ಮಾಡಲು ಗೂಗಲ್ ಐಎ ಪ್ರತ್ಯೇಕ ಸಾಧನವನ್ನು ರೂಪಿಸಿದ್ದು ಆ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಬಹಿರಂಗ ಪಡಿಸಿಲ್ಲ. ಈ ಬಗ್ಗೆ ಮಾತನಾಡಿರುವ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುಂದರ್ ಪಿಚ್ಚೈ, 'ಹೊಸ ವಿಧಾನದ ಹಾಗೂ ಕಡಿಮೆ ಸಮಯದಲ್ಲಿ ಪರಿಣಾಮಕಾರಿ ಪರೀಕ್ಷೆಗಳಿಂದ ಹೃದಯದ ಆರೋಗ್ಯದ ಬಗ್ಗೆ ತಿಳಿದುಕೊಳ್ಳುವ ಅವಕಾಶವನ್ನು ಎಐ ನಮಗೆ ನೀಡಿದೆ. ಅಲ್ಲದೆ, ರೆಟಿನಾ ಚಿತ್ರದ ಕಂಪ್ಯೂಟರ್ ವಿಷನ್‌ನಿಂದಾಗಿ ಹೃದಯದ ರಕ್ತನಾಳಕ್ಕೆ ಸಂಬಂಧಿಸಿದ ಫಲಿತಾಂಶಗಳನ್ನು ಸುಲಭವಾಗಿ ಪಡೆಯಬಹುದು' ಎಂದಿದ್ದಾರೆ. ಗೂಗಲ್ ಎಐನ ಈ ಸಾಧನವೂ ಇನ್ನೂ ಮಾರುಕಟ್ಟೆಗೆ ಬಂದಿಲ್ಲವಾದರೂ ಬಂದರೆ ದುಬಾರಿ ವೆಚ್ಚದ ಪರೀಕ್ಷೆಗಳಿಗೆ ಕಡಿವಾಣ ಬೀಳಲಿದೆ.

## ಮೊಬೈಲ್ ಕಳವು ಪತ್ತೆಗೆ ಸರ್ಕಾರ ನೆರವು

ಕಳ್ಳತನವಾದ ಮೊಬೈಲ್‌ಗಳ ಪತ್ತೆಗೆ ನಿರಾಸಕ್ತಿ ಹೊಂದಿದ್ದ ಸರ್ಕಾರವು ಈಗ ಆಸಕ್ತಿ ತೋರಿದೆ. ಈ ಸಂಬಂಧ ಪೈಲಟ್ ಯೋಜನೆಯನ್ನೂ ಮಹಾರಾಷ್ಟ್ರದಲ್ಲಿ ಈಗಾಗಲೇ ಜಾರಿಗೆ ತಂದಿದೆ.

ಈಗೇನಿದ್ದರೂ ಸ್ಮಾರ್ಟ್‌ಫೋನ್‌ಗಳ ಜಮಾನ. ಜಗಮಗಿಸುವ ಮೊಬೈಲ್ ಲೋಕದಲ್ಲಿ ಹೆಚ್ಚುತ್ತಿರುವ ಗ್ರಾಹಕರಂತೆ ಅವುಗಳನ್ನು ಕಳೆದುಕೊಳ್ಳುವವರ ಸಂಖ್ಯೆಯೂ ಹೆಚ್ಚುತ್ತಿದೆ. ಮೊಬೈಲ್‌ಗಿಂತ ಅದರಲ್ಲಿನ ಮಾಹಿತಿ ಸೋರಿಕೆ ಬಗ್ಗೆ ಬಳಕೆದಾರರು ಆತಂಕಕ್ಕೆ ಒಳಗಾಗಿದ್ದಾರೆ.

ಇದೇ ಕಾರಣಕ್ಕೆ ಎಚ್ಚೆತ್ತುಕೊಂಡಿರುವ ಕೇಂದ್ರ ಸರ್ಕಾರವು ಕಳೆದುಹೋದ ಮೊಬೈಲ್‌ಗಳ ಪತ್ತೆಗೆ ಪೈಲಟ್ ಯೋಜನೆ ಆರಂಭಿಸಿದೆ. ಯಶಸ್ವಿಯಾದರೆ ದೇಶದಾದ್ಯಂತ ಇದು ವಿಸ್ತಾರಗೊಳ್ಳಲಿದೆ. ಟೆಲಿಕಮ್ಯುನಿಕೇಷನ್ ಇಲಾಖೆಯು ಸೆಂಟ್ರಲ್ ಇಕ್ವಿಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್ (CEIR) ಸಹಯೋಗದಲ್ಲಿ ಐಎಂಇಐ ಸಂಖ್ಯೆಯ ಮೂಲಕ ಮೊಬೈಲ್ ಪತ್ತೆ ಮಾಡಲಿದೆ. ಟೆಲಿಕಾಂ ಸಚಿವ ರವಿಶಂಕರ್ ಪ್ರಸಾದ್, ಈ ಪೈಲಟ್ ಯೋಜನೆಗೆ ಮಹಾರಾಷ್ಟ್ರದಲ್ಲಿ ಈಚೆಗೆ ಚಾಲನೆ ನೀಡಿದ್ದಾರೆ.

ಕಾರ್ಯನಿರ್ವಹಣೆ ಹೇಗೆ?

ಮೊಬೈಲ್ ಕಳ್ಳತನವಾದರೆ ಅಥವಾ ಅದನ್ನು ಎಲ್ಲಾದರೂ ಮರೆತಿದ್ದರೆ ಮೊದಲು ಸಮೀಪದ ಪೊಲೀಸ್ ಠಾಣೆಗೆ ದೂರು ನೀಡಬೇಕು. ನಂತರ ಟೆಲಿಕಾಂ ಸಚಿವಾಲಯದ 14422 ಸಹಾಯವಾಣಿಗೆ ಮಾಹಿತಿ ನೀಡಬೇಕು.

ಐಎಂಇಐ ನಂಬರ್ ಆಧಾರದ ಮೇಲೆ ಟೆಲಿಕಾಂ ಸಚಿವಾಲಯದ ಸಿಬ್ಬಂದಿ ಹಾಗೂ ಪೊಲೀಸರು ಮೊಬೈಲ್ ಪತ್ತೆ ಮಾಡುತ್ತಾರೆ. ಪತ್ತೆಯಾಗದಿದ್ದರೆ ಐಎಂಇಐ ನಂಬರ್ ಬ್ಲಾಕ್ ಮಾಡುತ್ತಾರೆ. ಇದರಿಂದ ಮೊಬೈಲ್‌ಗೆ ಬೇರೊಂದು ಸಿಮ್ ಹಾಕಿ ಬಳಸಲು ಸಾಧ್ಯವಾಗುವುದಿಲ್ಲ. ಒಂದು ವೇಳೆ ಬೇರೊಂದು ಸಿಮ್ ಅಳವಡಿಸಲು ಮುಂದಾದರೆ ಪೊಲೀಸರಿಗೆ ಮಾಹಿತಿ ರವಾನೆಯಾಗಿ ಕದ್ದವರು ಸಿಕ್ಕಿಬೀಳುತ್ತಾರೆ.

■ **ಶಶಿಕುಮಾರ್ ಸಿ.**